# ‘ಮುಂದೊಂದು ದಿನ ಮಕ್ಕಳ ಸಾಹಿತ್ಯಕ್ಕೂ ಮನ್ನಣೆ ಬರುತ್ತದೆ...

■ ರಾಘವೇಂದ್ರ ಕೆ.



**ಲಲಿತಾ ಹೊಸಪ್ಯಾಟಿ**
ಬೆಂಗಳೂರು ಗ್ರಾಮಾಂತರ ಜಿಲ್ಲಾ ಉಪಯೋಜನಾ ಸಮನ್ವಯಾಧಿಕಾರಿ (ಶಿಕ್ಷಣ ಇಲಾಖೆ)

◆ **ಮಕ್ಕಳ ಸಾಹಿತ್ಯದಲ್ಲಿ ತೊಡಗಿಕೊಳ್ಳಬೇಕೆಂದು ನಿಮಗೆ ಏಕೆ ಅನಿಸಿತು?**

ನಾನು ಚಿಕ್ಕವಳಿದ್ದಾಗ ನಮ್ಮ ಅಜ್ಜಿ ನಮ್ಮ ಓಣಿಯಲ್ಲಿರುವ ಮಕ್ಕಳನ್ನೆಲ್ಲ ಕೂರಿಸಿಕೊಂಡು ಕಥೆ ಹೇಳುತ್ತಿದ್ದರು. ಅವರು ಹೇಳುತ್ತಿದ್ದ ಜನಪದ ಕಥೆಯಲ್ಲಿ, ಏಳು ಸಮುದ್ರ, ರಾಜಕುಮಾರಿ, ರಮ್ಯಲೋಕ ಇರುತ್ತಿತ್ತು. ಅಜ್ಜಿ ಚಂದ ಹಾಡುತ್ತಿದ್ದರು. ನಮ್ಮಿಂದಲೂ ಹಾಡಿಸುತ್ತಿದ್ದರು. ಬಹುಶಃ ಅದೂ ನನ್ನ ಮೇಲೆ ಪ್ರಭಾವ ಬೀರಿರಬಹುದು. 6ನೇ ತರಗತಿಯಿದ್ದಾಗ ನಾನೇ ಪುಟ್ಟ ಪುಟ್ಟ ಕಥೆಗಳನ್ನು ಕಟ್ಟುತ್ತಿದ್ದೆ. ಪ್ರಾಥಮಿಕ ಶಾಲಾ ಶಿಕ್ಷಕಿ ಆಗಿ 18ನೇ ವಯಸ್ಸಿನಲ್ಲಿ ನೇಮಕ ಆದೆ. ನಂತರ ಪ್ರೌಢಶಾಲೆ ಮುಖ್ಯ ಅಧ್ಯಾಪಕಿ, ಶಿಕ್ಷಣ ಇಲಾಖೆಯಲ್ಲಿ ವಿವಿಧ ಹುದ್ದೆಗಳನ್ನು ನಿರ್ವಹಿಸಿದರೂ ಮಕ್ಕಳ ಒಡನಾಟದಲ್ಲೇ ಬೆಳೆದೆ. ಮಕ್ಕಳ ಬಾಂಧವ್ಯ ಅವರಿಗೆ ಹೊಸತನ್ನು ಕಲಿಸಬೇಕು ಎಂಬ ಹುಮ್ಮಸ್ಸನ್ನು ತುಂಬಿತು. ಮಕ್ಕಳ ಸಾಹಿತ್ಯ ಕೊಟ್ಟ ಖುಷಿ ನನಗೆ ಬೇರೆ ಬರವಣಿಗೆ ಕೊಟ್ಟಿಲ್ಲವೇನೋ. ನಾನೂ ಸಣ್ಣಕಥೆ, ಲೇಖನ, ಪ್ರಬಂಧ, ವಿಮರ್ಶೆ ಕೂಡ ಬರೆಯುತ್ತೇನೆ. ನನ್ನ ಪಿಎಚ್.ಡಿ. ಅಧ್ಯಯನ ವಿಷಯವೂ ಮಕ್ಕಳ ಸಾಹಿತ್ಯ ಮತ್ತು ಶಿಕ್ಷಣಕ್ಕೆ ಸಂಬಂಧಿಸಿತ್ತು.

◆ **ಮಕ್ಕಳ ಸಾಹಿತ್ಯಕ್ಕೆ ಜನಮನ್ನಣೆ ಸಿಕ್ಕಿಲ್ಲ, ಏಕಿರಬಹುದು?**

ಜಿ.ಪಿ. ರಾಜರತ್ನಂ, ಕುವೆಂಪು ಮಕ್ಕಳ ಸಾಹಿತ್ಯಕ್ಕೆ ದೊಡ್ಡ ಕಾಣಿಕೆ ಕೊಟ್ಟಿದ್ದಾರೆ. ಮಕ್ಕಳ ಸಾಹಿತ್ಯ ಗಟ್ಟಿ ಮಾಡಿದರೆ ಮಕ್ಕಳ ಮನಸ್ಸನ್ನು ಗಟ್ಟಿ ಮಾಡಲು ಸಾಧ್ಯ. ಮುಂದೊಂದು ದಿನ ಅದರ ಅಗತ್ಯದ ತೀವ್ರತೆ ಖಂಡಿತ ಗೊತ್ತಾಗುತ್ತದೆ. ಪಂಜೆಯವರ ‘ತೆಂಕಣ ಗಾಳಿಯಾಟ’, ಕುವೆಂಪು ಅವರ ‘ಕಿಂದರಿ ಜೋಗಿ’, ಬೇಂದ್ರೆಯವರ ‘ಕರಡಿ ಕುಣಿತ’, ರಾಜರತ್ನಂ ಅವರ ‘ಬಣ್ಣದ ತಗಡಿನ ತುತ್ತೂರಿ’, ಸಿದ್ದಯ್ಯ ಪುರಾಣಿಕ್ ಅವರ ‘ಅಜ್ಜನ ಕೋಲಿದು ನನ್ನಯ ಕುದುರೆ’ – ಇವು ಅವತ್ತು ಇವತ್ತೂ ಖುಷಿ ಕೊಡುತ್ತವೆ. ಈಗಿನ ಸಾಹಿತ್ಯ ಆ ಮಟ್ಟಿನ ಖುಷಿ ಕೊಡುತ್ತಿಲ್ಲವೇನೋ? ಹೀಗಾಗಿ ಮಕ್ಕಳ ಸಾಹಿತ್ಯ ಅಂದಕೂಡಲೇ ಬೇರೆ ರೀತಿ ನೋಡುತ್ತಿದ್ದೇವೆ. ಮುಂದೊಂದು ದಿನ ಮಕ್ಕಳ ಸಾಹಿತ್ಯಕ್ಕೂ ಮನ್ನಣೆ ಸಿಗುತ್ತದೆ.

◆ **ಮಕ್ಕಳಿಗಾಗಿ ಬರೆಯುವ ಬರಹ ಹೇಗಿರಬೇಕು?**

‘ಕನ್ನಡಕ್ಕೆ ಹೋರಾಡು ಕನ್ನಡದ ಕಂದ, ಕನ್ನಡವ ಕಾಪಾಡು ನನ್ನ ಆನಂದ...’ ಎಷ್ಟು ಚಂದದ ಸಾಲುಗಳು. ಹೀಗೆ ಸಹಜವಾಗಿ, ಮಕ್ಕಳಿಗೆ ಹಿತವಾಗಿ, ಕಚಗುಳಿ ಇಡುವಂತೆ ಬರೆಯಬೇಕು.

ಮಕ್ಕಳ ಸಾಹಿತ್ಯ ಲಯ ಬದ್ಧವಾಗಿರಬೇಕು, ಕಲ್ಪನೆಯ ಜಗಿತ ಇರಬೇಕು, ಗೇಯತೆ, ದೇಸಿ ಸೊಗಡಿನ ಭಾಷೆ ಇರಬೇಕು. ಮಕ್ಕಳು ಮಾತ್ರವಲ್ಲದೆ ದೊಡ್ಡವರೂ ಇಷ್ಟಪಟ್ಟು ಓದುವಂತೆ ಇರಬೇಕು. ಮಕ್ಕಳಿಗೆ ಸಾಹಿತ್ಯದ ಪ್ರೀತಿ ಹುಟ್ಟಿಸುವಂತೆ ಆಗಬೇಕು. ಮಕ್ಕಳಿಗೆ ಕುಳಿತು ಕಥೆ ಹೇಳಿದರೆ ಹೇಳುವವರ ಹಾವಭಾವವನ್ನು ಮಕ್ಕಳು ನೋಡುತ್ತಾರೆ. ಗೊತ್ತಿಲ್ಲದ್ದನ್ನು ಮತ್ತೆ ಕೇಳುತ್ತವೆ. ಕುತೂಹಲ ಪ್ರಕಟಿಸುತ್ತವೆ. ಹೀಗೆ ಸಾಹಿತ್ಯದ ಮೂಲಕ ಮಗು ಕಲಿಯಲು ಅವಕಾಶ ಸಿಗುತ್ತದೆ. ಆದರೆ, ಈಗ ಕಥೆ ಹೇಳಲು ಯಾರಿಗೆ ಸಮಯ ಇದೆ? ಇಷ್ಟ ಆಗುವಂತೆ ಕಥೆ ಹೇಳಿದ್ದೇ ಆದರೆ ಮಕ್ಕಳಲ್ಲಿ ಕುತೂಹಲ, ಆಲೋಚನೆ, ತರ್ಕ, ಪ್ರಶ್ನೆ ಹುಟ್ಟುತ್ತವೆ. ಮಗು ಒಂದು ನಿಲುವು ತಾಳಲು, ಅರ್ಥ ಮಾಡಿಕೊಳ್ಳಲು, ಇನ್ನೊಂದಕ್ಕೆ ಹೋಲಿಸುವ, ಸಮರ್ಥಿಸುವ ಶಕ್ತಿಯನ್ನು ಗಳಿಸುತ್ತದೆ. ಈ ಕಾರಣಕ್ಕೆ ಮಕ್ಕಳಿಗಾಗಿ ಬರೆಯಬೇಕು.

◆ **ಹೊಸದಾಗಿ ಬರವಣಿಗೆ ರೂಢಿಸಿಕೊಳ್ಳಬೇಕು ಎಂದರೆ ಏನು ಮಾಡಬೇಕು?**

ಮೊದಲು ಓದಬೇಕು, ಅದರಿಂದ ಪದ ಸಂಪತ್ತು ನಮ್ಮಲ್ಲಿ ಬೆಳೆಯುತ್ತದೆ. ಪದಗಳ ಬಳಕೆಯ ಬಗ್ಗೆ ಜಾಗ್ರತೆ ವಹಿಸಬೇಕು. ಮೊದಲು ವಿಷಯ ನಮ್ಮ ಮನಸ್ಸಿನಲ್ಲಿ ಪ್ರವೇಶ ಪಡೆದಿರಬೇಕು. ಅದು ಗುನುಗುತ್ತಿರಬೇಕು. ಒಳಗಿನಿಂದ ಅರಳಿಕೊಂಡು ಬರಹ ರೂಪ ಪಡೆಯಬೇಕು. ಹೊಸ ಶೈಲಿಯನ್ನು ರೂಢಿಸಿಕೊಂಡರೂ ರಸವತ್ತಾಗಿ ಇರಬೇಕು. ಇಲ್ಲದಿದ್ದರೆ ಪ್ರಯೋಜನ ಇಲ್ಲ. ಭಾವಪೂರ್ಣವಾಗಿ ಹೇಳಬೇಕು. ಕಥೆ ಮಾತ್ರವಲ್ಲ, ಶಬ್ದಗಳು ಕೂಡ ಮಕ್ಕಳನ್ನು ಉಲ್ಲಾಸಗೊಳಿಸಬೇಕು. ■



**ಶಾಲ್ಮಲಿ ಭಟ್**
4ನೇ ತರಗತಿ, ಜ್ಯೋತಿ ಕೇಂದ್ರೀಯ ವಿದ್ಯಾಲಯ, ಬೆಂಗಳೂರು









**ಸಾಗರ ಜೆ.**
9ನೇ ತರಗತಿ, ಎಂ.ಎಂ. ಸರಕಾರಿ ಪ್ರೌಢ ಶಾಲೆ, ಹೊಳಲ್ಕೆರೆ